ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

2

ಶಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 27/6/2020

### ಬೆಂಗಳೂರಿನ ಜನಪ್ರತಿನಿಧಿಗಳ ಸಭೆ ಬಳಿಕ ಸರಕಾರದ ನಿರ್ಧಾರ ಪ್ರಕಟ

### ರಾಜಧಾನಿ ಪರಿಸ್ಥಿತಿ ನಿಯಂತ್ರಣಕ್ಕೆ ಕ್ರಮ | ಕ್ಷೇತ್ರವಾರು ಶಾಸಕರಿಗೆ ಜವಾಬ್ದಾರಿ

# ಮತ್ತೆ ಲಾಕ್‌ಡೌನ್ ಇಲ್ಲ

**ವಿಕ ಸುದ್ದಿಲೋಕ** ಬೆಂಗಳೂರು

ರಾಜಧಾನಿಯಲ್ಲಿ ಉಲ್ಬಣಿಸುತ್ತಿರುವ ಕೊರೊನಾ ಸೋಂಕಿನ ನಿಯಂತ್ರಣಕ್ಕಾಗಿ ಹಲವು ಕ್ರಮಗಳನ್ನು ಸರಕಾರ ಪ್ರಕಟಿಸಿದ್ದು, ಮತ್ತೊಮ್ಮೆ ಲಾಕ್‌ಡೌನ್ ಸಾಧ್ಯತೆಯನ್ನು ಸ್ಪಷ್ಟವಾಗಿ ನಿರಾಕರಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ನಡೆದ ರಾಜಧಾನಿಯ ಜನಪ್ರತಿನಿಧಿಗಳ ಸಭೆಯ ಬಳಿಕ ಕಂದಾಯ ಸಚಿವ ಆರ್. ಅಶೋಕ್ ಅವರು ಸರಕಾರದ ನಿರ್ಧಾರವನ್ನು ಪ್ರಕಟಿಸಿದರು. ಈ ನಡುವೆ, ಕೊರೊನಾ ನಿಯಂತ್ರಣದಲ್ಲಿ ವಿಫಲವಾಗಿರುವ ಸರಕಾರ ಲಾಕ್‌ಡೌನ್ ಕೂಡಾ ಮಾಡದೆ ಜನರ ಜೀವದ ಜತೆ ಚೆಲ್ಲಾಟವಾಡುತ್ತಿದೆ ಎಂದು ಪ್ರತಿಪಕ್ಷಗಳು ಆರೋಪಿಸಿವೆ. ಮತ್ತೆ ಲಾಕ್‌ಡೌನ್ ವಿಧಿಸಬೇಕು ಎನ್ನುವುದು ಪ್ರತಿಪಕ್ಷಗಳ ಆಗ್ರಹವಾಗಿತ್ತು.

ಬೆಂಗಳೂರಿನಲ್ಲಿ ಕೊರೊನಾ ಸೋಂಕು ಹೆಚ್ಚುತ್ತಿರುವುದು ನಿಜ. ಆದರೆ, ಅದನ್ನು ನಿಯಂತ್ರಿಸಿಕೊಂಡೇ ಅಭಿವೃದ್ಧಿ ಕಾರ್ಯ ನಡೆಯಬೇಕಾಗಿದೆ. ಇಡಿ ಪ್ರಪಂಚವೇ ಈಗ ಕೊರೊನಾ ಜತೆಗೇ ಸಾಗುವಂತಾಗಿದೆ ಎಂದು ಸಚಿವ ಅಶೋಕ್ ಹೇಳಿದರು. ಆಯಾ ಕ್ಷೇತ್ರದ ಜವಾಬ್ದಾರಿಯನ್ನು ಶಾಸಕರಿಗೆ ವಹಿಸುವುದು ಸೇರಿದಂತೆ ಸಭೆಯಲ್ಲಿ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

**ನಮಗೆ ಜೀವ ಹಾಗೂ ಜೀವನ ಎರಡೂ ಮುಖ್ಯ. ಹೀಗಾಗಿ ಬೆಂಗಳೂರಿನಲ್ಲಿ ನೋ ಲಾಕ್‌ಡೌನ್, ನೋ ಲಾಕ್‌ಡೌನ್ ನೋ ಲಾಕ್‌ಡೌನ್.**

**- ಆರ್. ಅಶೋಕ್**, ಕಂದಾಯ ಸಚಿವ



ಲಾಕ್‌ಡೌನ್ ನಿರ್ಧರಿಸಲು ಶುಕ್ರವಾರ ನಡೆದ ಬೆಂಗಳೂರು ಜನಪ್ರತಿನಿಧಿಗಳ ಸಭೆಯಲ್ಲಿ ಸಿಎಂ ಯಡಿಯೂರಪ್ಪ ಹಾಗೂ ಸಚಿವರು.

### ಸೀಲ್‌ಡೌನ್ ನಿಯಮ ಬದಲು

**ಸೋಂಕು ಕಾಣಿಸಿಕೊಂಡ ವ್ಯಕ್ತಿಯ ಮನೆಯ ಜತೆಗೆ ಅಕ್ಕಪಕ್ಕದ ಎರಡು ಬೀದಿ ಸೀಲ್‌ಡೌನ್ ಮಾಡಲು ನಿರ್ಧಾರ**

**ಬೆಂಗಳೂರಿನ ಪ್ರತಿ ವಾರ್ಡ್‌ಗೆ ಕೋವಿಡ್ ನಿಯಂತ್ರಣಕ್ಕಾಗಿ 25 ಲಕ್ಷ ರೂ. ಬಿಡುಗಡೆಗೆ ನಿರ್ಧಾರ.**

### ರಾಜ್ಯದಲ್ಲಿ 11,000

ರಾಜ್ಯದಲ್ಲಿ ಶುಕ್ರವಾರ 445 ಹೊಸ ಕೇಸ್ ಪತ್ತೆಯಾಗಿದ್ದು, ಸೋಂಕು 11,005ಕ್ಕೆ ಏರಿದೆ. 10 ಮಂದಿ ಮೃತಪಟ್ಟಿದ್ದು, ಒಟ್ಟು ಬಲಿ ಸಂಖ್ಯೆ 180 ಆಗಿದೆ. ಬೆಂಗಳೂರಿನಲ್ಲಿ 144 ಕೇಸ್ ದಾಖಲಾಗಿವೆ. ವಿವರ »02

### ದೇಶದಲ್ಲಿ 5 ಲಕ್ಷ ಸೋಂಕು

- ದೇಶದಲ್ಲಿ ಸೋಂಕು 5,06,889ಕ್ಕೇರಿದ್ದು, ಸಾವಿನ ಸಂಖ್ಯೆ 15,562ಕ್ಕೇರಿದೆ.
- ಜು.15ರವರೆಗೆ ಅಂತಾರಾಷ್ಟ್ರೀಯ ವಿಮಾನಯಾನ ಇಲ್ಲ

### ನಿಯಂತ್ರಣಕ್ಕೆ ಹಲವು ಕ್ರಮ

- ಬೆಡ್ ನಿರ್ವಹಣೆಗೆ ಐಎಎಸ್ ಅಧಿಕಾರಿ ತುಷಾರ್ ಗಿರಿನಾಥ್; ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ನೋಡಲ್ ಅಧಿಕಾರಿ
- ಲಕ್ಷಣರಹಿತ ಸೋಂಕಿತರು ಹೊಟೇಲ್ / ಕೇರ್ ಸೆಂಟರ್‌ಗೆ.
- ಆಯುರ್ವೇದ ಔಷಧ ಬಳಸಿ ನಿರೋಧಕ ಶಕ್ತಿ ಹೆಚ್ಚಳಕ್ಕೆ ಸಲಹೆ
- ಆಸ್ಪತ್ರೆ ನಿರ್ವಹಣೆ ಹೊಣೆ ಆಯಾ ಕ್ಷೇತ್ರದ ಶಾಸಕರಿಗೆ
- ಬೆಂಗಳೂರಿನ ನಿತ್ಯ ಪರೀಕ್ಷೆ 4,000ದಿಂದ 7,000ಕ್ಕೆ ಏರಿಕೆ
- ವಿಕ್ಟೋರಿಯಾದಲ್ಲಿ 120 ಹಾಸಿಗೆ ಖಾಲಿ, ಖಾಸಗಿಯಲ್ಲೂ ಚಿಕಿತ್ಸೆಗೆ ಕ್ರಮ.
- ವಾರದೊಳಗೆ 7300 ಹಾಸಿಗೆ ಸಾಮರ್ಥ್ಯ ಹೆಚ್ಚಳ
- 8 ಗಂಟೆಯಲ್ಲಿ ಆಸ್ಪತ್ರೆಗೆ ದಾಖಲು

### ಚಿಕಿತ್ಸೆ ನಿರಾಕರಿಸಿದರೆ ಕ್ರಮ

ಸೋಂಕಿತರನ್ನು ದಾಖಲಿಸಿಕೊಳ್ಳಲು ನಿರಾಕರಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಪ್ರಕೃತಿ ವಿಕೋಪ ನಿರ್ವಹಣೆ ಕಾಯ್ದೆಯಡಿ ಸರಕಾರಕ್ಕೆ ಯಾವುದೇ ಆಸ್ಪತ್ರೆಯನ್ನು ಚಿಕಿತ್ಸೆಗೆ ನಿಗದಿ ಮಾಡಲು ಅವಕಾಶವಿದೆ.

ಸೋಂಕು ತಡೆಗೆ ಕೊನೇ ಅವಕಾಶ | ಸಂಪಾದಕೀಯ »08

ಸರ್ವಪಕ್ಷ ಸಭೆಗೆ ಕಾಂಗ್ರೆಸ್ ಆಗ್ರಹ »07